**ಹರಟೆಹೊಡೆಯುವ ಜಾಯಮಾನವೇ ಇಲ್ಲ ಚಿಕ್ಕಿಗೆ, ಮನಃಸ್ಫೂರ್ತಿ ನಗದೆ ಅಳದೆ ಇಡೀ ಜೀವನವನ್ನೇ ಸವೆಸಬಹುದೆಂಬ ಸತ್ಯವನ್ನು ಚಿಕ್ಕಿಯನ್ನು ನೋಡಿದಮೇಲೆಯೇ ನಾನು ನಂಬಿದ್ದು.**

ಇದ್ದಿರಲೂಬಹುದು! ಒಂಟಿ ಎಂಬ ಭಾವನೆಯೇ ಹೀಗೆ, ಯಾರಿದ್ದಾರೋ ಇಲ್ಲವೋ ಎನ್ನುವುದು ಮಾನ್ಯವಾಗುವುದಿಲ್ಲ. ಒಂಟಿತನ ಎನ್ನುವುದು ಪೂರಾ ಮಾನಸಿಕ ಅವಸ್ಥೆ. ಯಾವಾಗ ಬೇಕಾದರೂ ಬರಬಹುದು, ತುಂಬು ಸಂಸಾರದಲ್ಲಿಯೂ ಮನುಷ್ಯ ತನಗ್ಯಾರಿಲ್ಲವೆಂದು ನೋಯಬಹುದು! ಆದರೆ ಇಷ್ಟು ವರ್ಷ ಒಂಟಿಯಾಗಿ ಬದುಕಿ ಇನ್ನೇನು ಎಲ್ಲವೂ ಮುಗಿಯುತ್ತದೆ ಎನ್ನುವಾಗ ಅದರ ಅರಿವಾಗುವುದು ದೂರದೂರಿಗೆ ದಾರಿ ಕ್ರಮಿಸಿ ಗಮ್ಯ ತಲುಪುತ್ತಲೇ ಈ ದಾರಿ ನನ್ನದಾಗಿರಲಿಲ್ಲವೆನ್ನಿಸಿದಂತೆ! ಬದುಕೂ ವ್ಯರ್ಥ, ಬದುಕಿದ್ದೂ ವ್ಯರ್ಥ ಎನ್ನಿಸಿದರೆ ಈ ಮುದಿ ಜೀವ ಈಗೆಷ್ಟು ಹಳಹಳಿಸುತ್ತಿದ್ದಿರಬೇಕು!

ಕಾಕಾ ಮನೆಬಿಟ್ಟು ಹೋದಾಗ ತೋರ್ಪಡಿಕೆಗೆಂಬಂತೆ ಕಣ್ಣೀರಿಟ್ಟರೂ ಅವನನ್ನು ಶಪಿಸಿ ಜರೆದದ್ದೇ ಹೆಚ್ಚು ಪಾತಿಚಿಕ್ಕಿ. ಆದರೆ ಹೀಗೆ ಮುಂದೊಂದು ದಿನ ಕಾಕನಿಗಾಗಿ ಅವಳು ಈ ರೀತಿ ಕೊರಗಬಹುದು ಎಂದುಕೊಂಡಿರಲಿಲ್ಲ.

ಪಾತಿಚಿಕ್ಕಿಗೆಂದು ಕ್ಯಾನಿನನಲ್ಲಿ ತುಂಬಿಸಿಕೊಂಡು ಬಂದಿದ್ದ ಕಬ್ಬಿನಹಾಲನ್ನು ಲೋಟಕ್ಕೆರೆಸಿ ಕೊಟ್ಟು ಉಳಿದಿದ್ದನ್ನು ಬೋಗುಣಿಗೆ ಬರಮಾಡಿ ಕುದಿಸಲಿಟ್ಟು ಬಂದೆ. ಅಡುಗೆಮನೆ ನೋಡಿದರೆ ಅಡುಗೆ ಮಾಡಿಟ್ಟಂತಿರಲಿಲ್ಲ, 'ಮಾದೇವಿ ಬಂದಿಲ್ಲವಾ ಅಡುಗೆಗೆ' ಎಂದು ಕೇಳಿದೆ. ಪಾತಿಚಿಕ್ಕಿ ಕಿವಿಗೆ ಹಾಕಿಕೊಳ್ಳಲಿಲ್ಲ. ಅಲ್ಲೇ ಮೂಲೆಯಲಿದ್ದ ಪುಟ್ಟ ಗಿಡವೆರಡು ಮನೆಯೊಳಗೆ ತಂಪಗೆ ಹಬ್ಬಿದ್ದರೂ ಕಿಡಕಿಯತ್ತಲೇ ಮುಖ ಮಾಡಿ ಸೂರ್ಯನಿಗಾಗಿ ತಪಿಸುತ್ತಿತ್ತು.

'ಚಿಕ್ಕಿ, ಯಾಕಿಲ್ಲಿ ಒಬ್ಬಳೇ ಇರುತ್ತೀಯಾ? ಮಗಳಂತೆ ನನ್ನನ್ನು ನೀನು ಸಾಕಿರುವಾಗ ಮಗಳಾಗಿ ನಾನು ನಿನ್ನನ್ನು ನಮ್ಮನೆಗೆ ಬಾ ಎಂದು ಕರೆದರೂ ಮತ್ಯಾಕೆ ನಿರಾಕರಿಸುವುದು. ಒಬ್ಬಳೇ ಎಲ್ಲವನ್ನೂ ನಿಭಾಯಿಸಿದ ಧಾಡಶಿ ನೀನು' ಎಂದು ಕಾಕಾನನ್ನು ನೆನಪಿಸಿಕೊಂಡು ಕೊರಗುವುದರಲ್ಲಿ ಅರ್ಥವಿಲ್ಲ ಎಂದೆ ಸಾಂಕೇತಿಕವಾಗಿ.



'ಆವತ್ತು ನಿನ್ನ ಕಾಕಾ ಮನೆಬಿಟ್ಟು ಹೋಗುವ ದಿನ ಏನಾಗಿತ್ತು ಗೊತ್ತಾ? ತೋಟದಲ್ಲಿ ಮಂಗಗಳ ಹಾವಳಿ ಹೆಚ್ಚಾಗಿ ಚಿಟಬಿಲ್ಲನ್ನು, ಆರಿಸಿಟ್ಟ ಚೂಪದ ಕಲ್ಲಿನ ಚೀಲವನ್ನು ತೆಗೆದುಕೊಂಡು ಹೋಗಿದ್ದೆ. ಮನೆಯಲ್ಲಿ ಗಂಡಸಿದ್ದೂ ನಾನೇ ಇಂತಹ ಕೆಲಸವನ್ನೆಲ್ಲಾ ಮಾಡಬೇಕಾಗಿದೆಯಲ್ಲ ಎಂಬ ಕೋಪವೂ ಇತ್ತು. ನನ್ನ ಹಣೆಬರಹವೋ ಏನೋ ಗೊತ್ತಿಲ್ಲಾ ಕಮಲಿ, ಅಂಗುಷ್ಟಕ್ಕಿಂತ ಸ್ವಲ್ಪ ದೊಡ್ಡದಿರಬಹುದು ಅಷ್ಟೇ... ಅಷ್ಟೇ ದೊಡ್ಡ ಕಲ್ಲನ್ನು ಚಿಟಬಿಲ್ಲಿಗೆ ಸಿಕ್ಕಿಸಿ ಹೊಡೆದಿದ್ದೆ. ಕಲ್ಲು ತಲೆಗೆ ತಗುಲಿ ಮಂಗ ಕೆಳಬಿದ್ದುಬಿಟ್ಟಿತ್ತು. ಕಲ್ಲಿನಿಂದ ಸಾಯದಿದ್ದರೂ ಕೆಳಗೆ ಬಿದ್ದ ಹೊಡೆತಕ್ಕೆ ಮಂಗ ಸತ್ತಿರಬೇಕು. ಮಂಗಗಳನ್ನು ಹೆದರಿಸಿ ಓಡಿಸಬೇಕೆಂದು ಹೋಗಿ ಈ ಎಡವಟ್ಟಾಗಿತ್ತು. ಆದರೂ ನಿನ್ನ ಕಾಕನ ಮೇಲಿನ ಕೋಪವಿತ್ತಲ್ಲ, ಸ್ವಲ್ಪವೂ ಕನಿಕರಿಸದೆ ಮಂಗವನ್ನು ಎಳೆದು ತೋಟದ ಮೂಲೆಗೊತ್ತಿ ಮನೆಗೆ ಬಂದು ಇದ್ದಬಿದ್ದ ಕೋಪವನ್ನೆಲ್ಲಾ ನಿನ್ನ ಕಾಕನ ಮೇಲೆ ಮತ್ತೆ ತೆಗೆದೆ. ಮದುವೆ ಮಾಡಿಸಿಬಿಟ್ಟಿದ್ದಾರೋ ಅಥವಾ ಶನಿಯನ್ನು ತಂದು ಕೊರಳಿಗೆ ಬಿಗಿದು